1	2	3	4
		8. ಹುಣಸೂರು	75.00
		9. ಪಿರಿಯಾಪಟ್ಟಣ	75.00
		10. ಹೆಚ್.ಡಿ.ಕೋಟೆ	100.00
		ಒಟ್ಟು	**826.035**
20.	ಕೋಲಾರ	1. ಕೋಲಾರ	150.00
		2. ಮಾಲೂರು	75.00
		3. ಮುಳಬಾಗಿಲು	75.00
		4. ಬಂಗಾರಪೇಟೆ	150.00
		5. ಶ್ರೀನಿವಾಸಪುರ	112.50
		6. ಚಿಕ್ಕಬಳ್ಳಾಪುರ	75.00
		7. ಚಿಂತಾಮಣಿ	75.00
		8. ಶಿಡ್ಲಘಟ್ಟ	75.00
		9. ಗೌರಿಬಿದನೂರು	150.00
		10. ಬಾಗೇಪಲ್ಲಿ	75.00
		11. ಗುಡಿಬಂಡೆ	50.00
		ಒಟ್ಟು	**1062.50**
		ಒಟ್ಟು	**14469.665**

ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸ್ವಂತ ಕಟ್ಟಡಗಳು.

1816 - ಶ್ರೀ ಎಸ್. ಎ. ರವೀಂದ್ರನಾಥ್ (ಮಾಯಗೊಂಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಸ್ವಂತ ಕಟ್ಟಡಗಳಿಲ್ಲದ ಶಾಲೆಗಳೆಷ್ಟು?

ಇ) ಕಟ್ಟಡ ಇಲ್ಲದ ಶಾಲೆಗಳಿಗೆ ಕಟ್ಟಡ ಕಟ್ಟಿಸಲು ಸರ್ಕಾರದ ಕ್ರಮ ಏನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 2281

ಆ) 540

ಇ) ಈ ಶಾಲೆಗಳಿಗೆ ಹಂತಹಂತವಾಗಿ ಸ್ವಂತ ಕಟ್ಟಡ ನಿರ್ಮಿಸುವ ಗುರಿ ಹೊಂದಲಾಗಿದ್ದು 1997-98ನೇ ಸಾಲಿನಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ 224 ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸ್ವಂತ ಕಟ್ಟಡ ಕುರಿತು.

1817 - ಶ್ರೀ ಎಸ್. ಎ. ರವೀಂದ್ರನಾಥ್ (ಮಾಯಗೊಂಡ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಎಷ್ಟಿವೆ?

ಆ) ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಎಷ್ಟು ಇರುತ್ತದೆ?

ಇ) ದಾವಣಗೆರೆ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? (ಹಾಗಿದ್ದಲ್ಲಿ ಯಾವಾಗ ಕಟ್ಟಿಸಲಾಗುವುದು)

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) 149 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು.

297 ಖಾಸಗಿ ಅನುದಾನಿತ ಕಾಲೇಜುಗಳು.

375 ಖಾಸಗಿ ಅನುದಾನರಹಿತ ಕಾಲೇಜುಗಳು.

ಆ) 8 ಸರ್ಕಾರಿ ಪ್ರಥಮ ದರ್ಜೆ ಕಾಲೇಜು

11 ಖಾಸಗಿ ಅನುದಾನಿತ ಕಾಲೇಜುಗಳು.

19 ಖಾಸಗಿ ಅನುದಾನರಹಿತ ಕಾಲೇಜುಗಳು.

ಇ) ದಾವಣಗೆರೆ ಪಿ.ಟಿ.ಐ ಸಂಸ್ಥೆಗೆ ಸೇರಿದ 21.7 ಎಕರೆ ಜಮೀನಲ್ಲಿ ಕಾಲೇಜಿನ ಕಟ್ಟಡಕ್ಕಾಗಿ 6 ಎಕರೆ ಜಮೀನು ಮಂಜೂರು ಮಾಡಿಸಿಕೊಡಬೇಕೆಂದು ಚಿತ್ರದುರ್ಗ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆಯಲಾಗಿದೆ. ನಿವೇಶನ ಮಂಜೂರಾದ ಕೂಡಲೇ ಕಟ್ಟಡ ನಿರ್ಮಾಣಕ್ಕಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.